# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 216,** ಬಿಬಿಎಂಪಿ ವಾರ್ಡ್ ಕಛೇರಿ, ವಿವಿಧೋದ್ದೇಶ ಕಟ್ಟಡ, ಶ್ರೀಕಂಠೇಶ್ವರ ಪಾರ್ಕ್ ಹತ್ತಿರ, ಚೆನ್ನಮ್ಮನಕೆರೆ ಅಚ್ಚುಕಟ್ಟು, ಬೆಂಗಳೂರು-560085.

---

ಸಂಖ್ಯೆ: ಸ.ಅ/ವಿ.ಪೀ/ವಾ-216/03/2022-23. ದಿನಾಂಕ: 14-09-2022

## ಸಭೆಯ ಸೂಚನಾ ಪತ್ರ

ವಿಷಯ: ಸೆಪ್ಟಂಬರ್-2022 ತಿಂಗಳ 3ನೇ ಶನಿವಾರದ ವಾರ್ಡ್ ಸಮಿತಿ ಸಭೆ.

ಉಲ್ಲೇಖ: ಮಾನ್ಯ ಆಯುಕ್ತರ ಆದೇಶ ಸಂಖ್ಯೆ: ಬಿ12(58)ಪಿಆರ್/35/2020-21, ದಿನಾಂಕ: 21-09-2020

********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬಸವನಗುಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್-216ರ (ಹಳೇ ವಾರ್ಡ್-164) ಸೆಪ್ಟಂಬರ್-2022 ತಿಂಗಳ 3ನೇ ಶನಿವಾರದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 17-09-2022ರಂದು ಶನಿವಾರ ಸಂಜೆ 4.00 ಗಂಟೆಗೆ ಸರಿಯಾಗಿ **ವಾರ್ಡ್ ಸಂಖ್ಯೆ: 216,** (ಹಳೇ ವಾರ್ಡ್-163, ಕತ್ರಿಗುಪ್ಪೆ ವಾರ್ಡ್ ಕಛೇರಿ) ಬಿಬಿಎಂಪಿ ವಿವಿಧೋದ್ದೇಶ ಕಟ್ಟಡ, ಶ್ರೀಕಂಠೇಶ್ವರ ಪಾರ್ಕ್ ಹತ್ತಿರ ಇಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ 216ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ಸಾರ್ವಜನಿಕರಿಂದ ಬಂದಂತಹ ಮನವಿಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸ ಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಕೋವಿಡ್-19ರ ನಿಯಂತ್ರಣದ ಬಗ್ಗೆ ಆಸ್ತಿ ತೆರಿಗೆ ವಸೂಲಾತಿ, ಚುನಾವಣಾ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ ಕುರಿತು, ಮಳೆಯಿಂದ ಉಂಟಾಗುವ ಪ್ರವಾಹ ತುರ್ತು ಕೆಲಸಗಳು ಹಾಗೂ ದೂರುಗಳ ಬಗ್ಗೆ, ಬೀದಿ ದೀಪಗಳ ನಿರ್ವಹಣೆ, ಉದ್ಯಾನವನ ನಿರ್ವಹಣೆ ಮತ್ತು ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿರುತ್ತದೆ. ಈ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸದಸ್ಯರು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂ: 216, ವಿದ್ಯಾಪೀಠ

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂ: 216, ವಿದ್ಯಾಪೀಠ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
7. ಮಾನ್ಯ ಉಪ ನಿಯಂತ್ರಕರು (ಹಣಕಾಸು) ಬೊಮ್ಮನಹಳ್ಳಿ ವಲಯ ಹಾಗೂ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು(ಗಿರಿನಗರ) ಉಪವಿಭಾಗ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೃ.ನೀ.ಗಾ) ವಿಭಾಗ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ಬಸವನಗುಡಿ ವಿಭಾಗ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು (ಬಸವನಗುಡಿ) ಉಪವಿಭಾಗ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
13. ಆರೋಗ್ಯ ವೈದ್ಯಾಧಿಕಾರಿಗಳು (ಬಸವನಗುಡಿ) ವಲಯ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
14. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಿ.ಟಿ ಬೆಡ್ ರವರ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
15. ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
18. ಪೋಲೀಸ್ ಅಧಿಕಾರಿಗಳು, ಸಿ.ಕೆ ಅಚ್ಚುಕಟ್ಟು / ಹನುಮಂತನಗರ ಪೋಲೀಸ್ ಠಾಣೆ ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
19. ಕೋವಿಡ್-19 ಮಾರ್ಷಲ್‌ರವರು ರವರು ಎಲ್ಲಾ ದಾಖಲೆಗಳೊಂದಿಗೆ ಸಭೆಗೆ ಹಾಜರಾಗಲು ಕೋರಿದೆ/ ಕಛೇರಿ ಸೂಚನಾ ಫಲಕಕ್ಕೆ.

Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 216, ಬಿಬಿಎಂಪಿ ವಾರ್ಡ್ ಕಛೇರಿ, ವಿವಿಧೋದ್ದೇಶ ಕಟ್ಟಡ**
**ಶ್ರೀಕಂಠೇಶ್ವರ ವಾರ್ಡ್ ಪಾರ್ಕ್ ಹತ್ತಿರ, ಚನ್ನಮ್ಮನಕೆರೆ ಅಚ್ಚುಕಟ್ಟು, ಬೆಂಗಳೂರು-560085**

ದಿನಾಂಕ 19/9/2022

ಸಂಖ್ಯೆ: ಸ.ಅ/ವಿ.ಪೀ./ವಾ-216/03/2022-23

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

**ವಿಷಯ** : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಕಛೇರಿ ಆದೇಶದ ಸಂಖ್ಯೆ ಬಿ12(5)/ಪಿಆರ್/35/2020-21, ದಿನಾಂಕ: 21.09.2020ರ ಆದೇಶದಂತೆ ದಿನಾಂಕ 17-09-2022ರಂದು ವಾರ್ಡ್ ಸಂಖ್ಯೆ 216, ವಿದ್ಯಾಪೀಠ ವಾರ್ಡ್ ಕಛೇರಿಯಲ್ಲಿ ನಡೆದ ಸೆಪ್ಟೆಂಬರ್ ತಿಂಗಳ 3ನೇ ಶನಿವಾರದ ವಾರ್ಡ್ ಸಮಿತಿ ಸಭೆಯ ನಡವಳಿಗಳು

*****

**ಸ್ಥಳ** - ಬಿಬಿಎಂಪಿ ವಾರ್ಡ್ ಕಛೇರಿ, ವಿವಿಧೋದ್ದೇಶ ಕಟ್ಟಡ, ಶ್ರೀಕಂಠೇಶ್ವರ ಪಾರ್ಕ್ ಹತ್ತಿರ
**ಸಮಯ** - ಸಂಜೆ 4.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1. | ಶ್ರೀ ವಿಜಯಕುಮಾರ್ ಆರ್. | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ಉಪನಿಯಂತ್ರಕರು (ಹಣಕಾಸು)(ಕೇಂದ್ರ) |
| 2. | ಶ್ರೀ ವಿಜಯ್‌ಕುಮಾರ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್-164/216, ವಿದ್ಯಾಪೀಠ |
| 3. | ಶ್ರೀ ಎಂ. ಸುರೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 164/216 |
| 4. | ಡಾ।। ವಿನುತ | ಆರೋಗ್ಯ ವೈದ್ಯಾಧಿಕಾರಿಗಳು, ವಾರ್ಡ್ ನಂ. 164/216 |
| 5. | ಶ್ರೀ ಡಾ।। ಸುಪ್ರಿತ | ಆರೋಗ್ಯ ವೈದ್ಯಾಧಿಕಾರಿಗಳು, ಸಿ.ಟಿ. ಬೆಡ್ ಪ್ರಾಥಮಿಕ ಆರೋಗ್ಯಕೇಂದ್ರ |
| 6. | ಶ್ರೀ ಪಿ. ಜ್ಞಾನೇಶ್ವರ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 7. | ಶ್ರೀ ವಿಷಕಂಠಯ್ಯ | ಕೆಲಸ ಪರಿವೀಕ್ಷಕರು, ವಾರ್ಡ್ ನಂ. 164/216 |
| 8. | ಶ್ರೀ ಸತೀಶ್ ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 164/216 |
| 9. | ಶ್ರೀ ಉಮೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು, ಸಿ.ಟಿ.ಬೆಡ್, ಕತ್ರಿಗುಪ್ಪೆ |
| 10. | ಶ್ರೀ ಸಾಯಿಕುಮಾರ್ | ವಾರ್ಡ್ ಹಿರಿಯ ನಾಗರಿಕರು |
| 11. | ಶ್ರೀ ಲಕ್ಷ್ಮೀಶ | ಸಾರ್ವಜನಿಕರು |
| 12. | ಶ್ರೀ ಜಗದೀಶ್ ಎಸ್. | ಘ.ತ್ಯಾ.ನಿ. ಸೂಪರ್‌ವೈಸರ್ |
| 13. | ಶ್ರೀ ಮಸೂದ್‌ಖಾನ್ | ಮೇಸ್ತ್ರಿ |
| 14. | ಶ್ರೀ ರಾಜು | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ವಿಜಯಕುಮಾರ್‌ರವರು ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಿದರು. ಸಭೆಯಲ್ಲಿ ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ವಾರ್ಡ್ ಅಭಿಯಂತರರು ಕೈಗೊಂಡ ವರದಿಯನ್ನು ಓದಿ ತಿಳಿಸಿದರು.

1) ಪ್ರಾರಂಭದಲ್ಲಿ ವಾರ್ಡ್‌ಗೆ ಸಂಬಂಧಿಸಿದಂತೆ ಪ್ರತಿ ನಿತ್ಯದ ದೂರುಗಳು, ರಸ್ತೆಗುಂಡಿ ಮುಚ್ಚುವುದು, ಅನುಪಯುಕ್ತ ವಸ್ತುಗಳನ್ನು ತೆಗೆಯುವುದು, ಚರಂಡಿ ಹೂಳನ್ನು ತೆಗೆಯುವುದು, ಅನಧಿಕೃತ ತ್ಯಾಜ್ಯವನ್ನು ತೆಗೆಯುವುದು, ಇನ್ನಿತರೇ ವಾರ್ಡಿನಲ್ಲಿ ಬರುವ ದೂರುಗಳಿಗೆ ಸ್ಪಂದಿಸಿ ಕೆಲಸ ನಿರ್ವಹಿಸಲು ಗುತ್ತಿಗೆದಾರರ ಮುಖಾಂತರ ಸಿಲ್ಟ್ ಮತ್ತು ಟ್ರಾಕ್ಟರ್ ನೇಮಕಗೊಂಡಿದ್ದು, ಇದರ ಮುಖಾಂತರ ಮೇಲ್ಕಂಡ ಎಲ್ಲಾ ಕೆಲಸ ಕಾರ್ಯಗಳನ್ನ ನಿರ್ವಹಿಸುತ್ತಿರುವುದಾಗಿ ವಾರ್ಡ್ ಅಭಿಯಂತರರು ಸಭೆಯಲ್ಲಿ ತಿಳಿಸಿದ್ದು, ಮುಂದಿನ ದಿನಗಳಲ್ಲಿ ರಸ್ತೆಗುಂಡಿ ಮುಚ್ಚುವ ಸಂದರ್ಭದಲ್ಲಿ ವೆಟ್ ಮಿಕ್ಸ್ ಜೊತೆಗೆ ಸಿಮೆಂಟನ್ನು ಸಮಪ್ರಮಾಣದಲ್ಲಿ ಮಿಕ್ಸ್ ಮಾಡಿ ರಸ್ತೆ ಗುಂಡಿಗಳನ್ನು ಮುಚ್ಚುವುದರಿಂದ ರಸ್ತೆಗುಂಡಿಗಳು ಮರುಕಳಿಸದಂತೆ ಮಾಡಬಹುದಾಗಿದೆ. ಮತ್ತು ಮುಂದಿನ ಸಭೆಯಲ್ಲಿ ಎಲ್ಲಾ ವಿವರಗಳನ್ನು ಒದಗಿಸುವಂತೆ ವಲಯ ಆಯುಕ್ತರು ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವಾರ್ಡ್ ಇಂಜಿನಿಯರ್‌ರವರು ಸಭೆಯಲ್ಲಿ ತಿಳಿಸಿರುತ್ತಾರೆ.

2) ವೈದ್ಯಾಧಿಕಾರಿ (ಸಿಟಿ ಬೆಡ್ ಆರೋಗ್ಯಕೇಂದ್ರ) ರವರು, ಸಭೆಯಲ್ಲಿ ಹಾಜರಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19ಗೆ ಸಂಬಂಧಿಸಿದಂತೆ, ಒಟ್ಟು 1260 ಪರೀಕ್ಷೆಗಳನ್ನು ಮಾಡಲಾಗಿದ್ದು, 2 ರಿಂದ 3 ಪಾಸಿಟಿವ್ ಕಂಡುಬರುತ್ತಿದ್ದು, 1 ಹೋಮ್ ಕ್ವಾರಂಟೈನ್‌ನಲ್ಲಿದ್ದು, 02 ಜನ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಕೋರ್ಬಿ ವ್ಯಾಕ್ಸಿನೇಷನ್ ಲಭ್ಯವಿರುವುದಿಲ್ಲ. ಕೋವಿಡ್‌ಗೆ ಸಂಬಂಧಿಸಿದಂತೆ ಬೂಸ್ಟರ್ ಡೋಸ್ ಸೇರಿ ಒಟ್ಟು 460 ಲಸಿಕೆ ನೀಡಲಾಗಿರುತ್ತದೆ. 12 ರಿಂದ 18 ವರ್ಷದ ಮಕ್ಕಳಿಗೆ ನೀಡುತ್ತಿರುವ ಕೋರ್ಬಿವ್ಯಾಕ್ಸ್ ಲಸಿಕೆಯ ಮೊದಲನೇ ಹಂತ ಪೂರ್ಣಗೊಳಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಮುಂದಿನ ಸಭೆಯಲ್ಲಿ ಪೂರ್ಣ ವಿವರಗಳನ್ನು ನೀಡಲು ಅಧ್ಯಕ್ಷರು ಸೂಚಿಸಿರುತ್ತಾರೆ.

3) ವಾರ್ಡ್ ವ್ಯಾಪ್ತಿಯಲ್ಲಿ ಮನೆ ಮನೆ ಸರ್ವೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಒಟ್ಟು 2449 ಮನೆಗಳನ್ನು ಸರ್ವೆ ಮಾಡಿದ್ದು, ಅವುಗಳಲ್ಲಿ ಡೆಂಗ್ಯೂ-02 ಪಾಸಿಟಿವ್ ಮತ್ತು ಚಿಕನ್‌ಗುನ್ಯಾ-02 ಪಾಸಿಟಿವ್ ಪ್ರಕರಣಗಳು ಕಂಡುಬಂದಿರುತ್ತವೆ. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಮಲೇರಿಯಾ ಹರಡುವ ಸಾಧ್ಯತೆ ಇರುವುದರಿಂದ ಹೋಟೆಲ್ ಮತ್ತು ಜನಸಾಂದ್ರತೆ ಹೆಚ್ಚಿರುವ ಸ್ಥಳಗಳಲ್ಲಿ ಕುಡಿಯುವ ನೀರಿನ ತಪಾಸಣೆ ಕೈಗೊಳ್ಳಲಾಗಿದೆಯೆಂಬ ವಿವರಗಳನ್ನು ಘನತ್ಯಾಜ್ಯ ನಿರ್ವಹಣೆಯ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಅಧ್ಯಕ್ಷರು ಕೋರಿದಾಗ, ಆರೋಗ್ಯ ಪರಿವೀಕ್ಷಕರು ಉತ್ತರಿಸಿ, ಎಲ್ಲಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದ್ದು, ಸಿಂಪಡಣೆ ಕಾರ್ಯಕ್ರಮವನ್ನು ಮುಂದುವರೆಸಲಾಗಿದೆ ಎಂದು ಸಭೆಗೆ ತಿಳಿಸಿರುತ್ತಾರೆ. ನಮ್ಮ ಕ್ಲಿನಿಕ್‌ಗೆ ಸ್ಥಳಗಳಾದ ಮಂಜುನಾಥ ಕಾಲೊನಿ, ಸ್ಲಂ-ಬೋರ್ಡ್‌ನಿಂದ ನಿರ್ಮಿಸಿರುವ ವಸತಿ ಸಂಕೀರ್ಣದ ನೆಲಮಹಡಿಯ ಲಭ್ಯವಿರುವ ಸ್ಥಳವನ್ನು ಆಯ್ಕೆ ಮಾಡಿ, ಪರಿಶೀಲಿಸಿ, ಅಗತ್ಯ ಸೌಲಭ್ಯಗಳ ಬಗ್ಗೆ ಅಂದಾಜುಪಟ್ಟಿಯನ್ನು ತಯಾರಿಸಲು ಕಳೆದ ಸಭೆಯಲ್ಲಿ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದ್ದು, ಈ ಸಭೆಯಲ್ಲಿ ವಿವರಗಳನ್ನು ನೀಡಿರುವುದಿಲ್ಲ. ಮುಂದಿನ ಸಭೆಯಲ್ಲಿ ನೀಡುವಂತೆ ವಾರ್ಡ್ ಇಂಜಿನಿಯರ್‌ರವರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.

4) ವಾರ್ಡ್ ವ್ಯಾಪ್ತಿಯಲ್ಲಿ ಮರದ ರೆಂಬೆಕೊಂಬೆಗಳನ್ನು ತೆರವುಗೊಳಿಸಲು ತೋಟಗಾರಿಕೆ ಇಲಾಖೆಗೆ ಪತ್ರಬರೆಯಲು ಸಭೆಯಲ್ಲಿ ಹಾಜರಿದ್ದ ಶ್ರೀ ಲಕ್ಷ್ಮೀಶ್, ಸಾರ್ವಜನಿಕರು ಅಧ್ಯಕ್ಷರನ್ನು ಕೋರಿರುತ್ತಾರೆ. ಉದ್ಯಾನವನಗಳಲ್ಲಿ ಕಸ ತೆಗೆಯುವಂತೆ ತೋಟಗಾರಿಕೆ ಇಲಾಖೆಯ ಮೇಸ್ತ್ರಿ ಮಸೂದ್ ಖಾನ್‌ರವರಿಗೆ ಸಭೆಯಲ್ಲಿ ಅಧ್ಯಕ್ಷರು ಸೂಚಿಸಿರುತ್ತಾರೆ.

5) ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬೀದಿದೀಪಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಭೆಯಲ್ಲಿ ಅಧ್ಯಕ್ಷರು ತಿಳಿಸಿರುತ್ತಾರೆ. ಹಾಗೂ ದೀಪಗಳ ಬೆಳಕು ಬೀಳದಂತೆ ಕೆಲವು ಮರದ ರೆಂಬೆಕೊಂಬೆಗಳು ಬೀದಿದೀಪಗಳಿಗೆ ಅಡ್ಡಲಾಗಿ ಇರುತ್ತವೆ. ಆದುದರಿಂದ ಅಂತಹ ಮರದ ರೆಂಬೆಕೊಂಬೆಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ ಲಕ್ಷ್ಮೀಶ, ಸಾರ್ವಜನಿಕರು ಸಭೆಯ ಗಮನಕ್ಕೆ ತಂದಿರುತ್ತಾರೆ. ಆದುದರಿಂದ ಸದರಿ ದೂರಿನ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

6) ವಾರ್ಡ ವ್ಯಾಪ್ತಿಯಲ್ಲಿ ಬರುವ ಅಪ್ಪಯ್ಯ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣದಲ್ಲಿನ ಬೋರ್‌ವೆಲ್ ದುರಸ್ಥಿಯಲ್ಲಿದ್ದು, ಅದನ್ನು ಕೂಡಲೇ ದುರಸ್ಥಿಗೊಳಿಸಬೇಕೆಂದು ಸಾರ್ವಜನಿಕರು ಕೋರಿದ್ದು, ಅದನ್ನು ಕುರಿತು ಕ್ರಮ ಕೈಗೊಳ್ಳಲು ಮಾನ್ಯ ವಲಯ ಆಯುಕ್ತರು (ದಕ್ಷಿಣ)ದವರು ಕಳೆದ ಸಭೆಯಲ್ಲಿ ಸೂಚಿಸಿದ್ದು, ಘನತ್ಯಾಜ್ಯ ಉಪವಿಭಾಗದವರು ಪರಿಶೀಲಿಸುತ್ತಿದ್ದು ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

7) ವಾರ್ಡ್ ವ್ಯಾಪ್ತಿಯಲ್ಲಿ ಮತದಾರರ ನೊಂದಣಿ ಅಭಿಯಾನವನ್ನು ಹಮ್ಮಿಕೊಂಡಿದ್ದು, ಅಭಿಯಾನದಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಹಾಗೂ ಹಾಲಿ ಇರುವ ಮತದಾರರ ಪಟ್ಟಿಯಲ್ಲಿ ವರ್ಗಾವಣೆ, ಅಥವಾ ಮರಣ ಹೊಂದಿರುವ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆಯುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ಕಂದಾಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ. ವಾರ್ಡ ವ್ಯಾಪ್ತಿಯಲ್ಲಿ ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡುವ ಪ್ರಕ್ರಿಯೆಯು ಶೇ. 40ರಷ್ಟು ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆ ಪ್ರಕ್ರಿಯೆಯನ್ನು ಮುಂದುವರಿಸುತ್ತಿರುವುದಾಗಿ ಅಧ್ಯಕ್ಷರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ, 2022-23ನೇ ಸಾಲಿನ ಕಂದಾಯ ತೆರಿಗೆ ವಾರ್ಷಿಕ 500 ಲಕ್ಷ ರೂ. ಬೇಡಿಕೆಯಿದ್ದು, ಈ ವರೆಗೆ 403.5 ಲಕ್ಷರೂ.ಗಳ ವಸೂಲಿಯಾಗಿದ್ದು, ಬಾಕಿ ಇರುವ ಕಂದಾಯ ವಸೂಲಾತಿಯನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ.

8) ವಾರ್ಡ್ ವ್ಯಾಪ್ತಿಯಲ್ಲಿನ ಗುರುರಾಜ ಬಡಾವಣೆಯಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಕೂಡಲೇ ಅವುಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಸದರಿ ಪ್ರದೇಶದ ಖಾಲಿ ನಿವೇಶನಗಳಲ್ಲಿ ಹಾವುಗಳು ಕಂಡುಬರುತ್ತಿರುವುದಾಗಿ ದೂರುಗಳು ಬಂದಿದ್ದು, ಕೂಡಲೇ ಸದರಿ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಲು ಕ್ರಮ ವಹಿಸಬೇಕೆಂದು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.

9) ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳು ಬ್ಲಾಕ್‌ಸ್ಪಾಟ್ ಮತ್ತು ಇತರ ಪ್ರದೇಶಗಳಲ್ಲಿ ಬ್ಲೀಚಿಂಗ್ ಪೌಡರ್ ಮತ್ತು ಫಿನಾಯಿಲ್ ಹಾಕಿ ಅದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕೆಂದು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್-216, ವಿದ್ಯಾಪೀಠ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು
ವಾರ್ಡ್-216, ವಿದ್ಯಾಪೀಠ

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎಸ್.ಆರ್.ವೃತ್ತರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ)ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘ.ತ್ಯಾ.ನಿ.) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು (ಆಡಳಿತ)ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ)ರವರ ಮಾಹಿತಿಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.